ಮುಂಡರಗಿ ಪಟ್ಟಣದ ಪ್ರಗತಿ ವರದಿ:

ರಸ್ತೆ ಹಾಗೂ ಚರಂಡಿ ಕಾಮಗಾರಿಗಳಿಗೆ	ರೂ. 15.60 ಲಕ್ಷ
(6 ರಸ್ತೆ ಹಾಗೂ 6 ಚರಂಡಿ ಕಾಮಗಾರಿಗಳಿಗೆ)	
ಮುಳಗುಂದ ಪಟ್ಟಣದ ಪ್ರಗತಿ ವರದಿ:	
ವಾಣಿಜ್ಯ ಮಳಿಗೆ ನಿರ್ಮಾಣ	ರೂ. 6.05 ಲಕ್ಷ
ಕಛೇರಿ ಕಟ್ಟದ ಕಾಮಗಾರಿ	ರೂ. 17.23 ಲಕ್ಷ
(ಪ್ರಗತಿಯಲ್ಲಿದೆ)	
7 ರಸ್ತೆ ಕಾಮಗಾರಿಗಳು	ರೂ. 16.72 ಲಕ್ಷ

(ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು ಸದ್ಯದಲ್ಲೇ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು)

ಮುಂಡರಗಿ ಪಟ್ಟಣವು ಶೇಕಡಾ 70ಕ್ಕಿಂತ ಹೆಚ್ಚಿನ ಮೊತ್ತವನ್ನು ಖರ್ಚು ಮಾಡಿ ಹಣ ಬಳಕೆ ಪ್ರಮಾಣ ಪತ್ರ ಸಲ್ಲಿಸಿದ್ದು, 2ನೇ ಕಂತಿನ ಹಣವನ್ನು ಬಿಡುಗಡೆ ಮಾಡುವಂತೆ ಕೋರಿ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಪತ್ರ ಬರೆಯಲಾಗಿದೆ.

ಈ) ಯೋಜನೆಯ ಮಾರ್ಗಸೂಚಿಯನುಸಾರ ಕಾಮಗಾರಿಗಳನ್ನು ಪೂರ್ಣಗೊಳಿಸಲು 5 ವರ್ಷಗಳ ಕಾಲಮಿತಿ ಇರುತ್ತದೆ.

677(805) : ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) ಮಾನ್ಯ ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಡ್ಕೋ ಸಾಲದ ಯೋಜನೆಯಲ್ಲಿ ಪುರಸಭೆ, ನಗರಸಭೆ ಮತ್ತು ಪಟ್ಟಣ ಪಂಚಾಯತಿಗಳಿಗೆ ಮಂಜೂರಾದ ಸಾಲವೆಷ್ಟು; (ವಿವರ ನೀಡುವುದು).

ಆ) ಸದರಿ ಕಾಮಗಾರಿಗಳ ಪ್ರಗತಿ ಯಾವ ಹಂತದಲ್ಲಿದೆ; (ವಿವರ ನೀಡುವುದು)

ಇ) ಈ ಕಾಮಗಾರಿಗಳಲ್ಲಿ ಹಣದ ದುರುಪಯೋಗ ಆಗಿದೆಯೇ;

ಈ) ಹಾಗಿದ್ದಲ್ಲಿ ಯಾವ ಯಾವ ಕಾಮಗಾರಿಗಳಲ್ಲಿ ದುರುಪಯೋಗ ಆಗಿದೆ; (ವಿವರ ನೀಡುವುದು)?

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು)

ಅ) ಒಟ್ಟು 130.00 ಕೋಟಿ ರೂ.ಗಳು.

ನಗರ ಪಾಲಿಕೆಗಳಿಗೆ	:	2.00 ಕೋಟಿ ರೂ.ಗಳು
ನಗರಸಭೆಗಳಿಗೆ	:	1.00 ಕೋಟಿ ರೂ.ಗಳು
ಪುರಸಭೆಗಳಿಗೆ	:	50.00 ಲಕ್ಷ ರೂಗಳು
ಪಟ್ಟಣ ಪಂಚಾಯತಿಗಳಿಗೆ	:	25.00 ಲಕ್ಷ ರೂಗಳು

ಆ) ಬಹುತೇಕ ಪೂರ್ಣಗೊಂಡಿವೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

678(637) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?